ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ನಮಗೆ ಕಣ್ಣು, ಕಿವಿ, ಕೈಕಾಲು ಎರಡೆರಡು ಕರುಣಿಸಿರುವ ದೇವರು ಬಾಯಿ ಮಾತ್ರ ಒಂದೇ ಏಕೆ ಕೊಟ್ಟ?



ಒಂದು ಬಾಯಿಂದಲೇ ಹತ್ತು ಜನ್ಮಕ್ಕಾಗುವಷ್ಟು ತಿನ್ನಬಲ್ಲರೆಂದು ತಿಳಿದಿದ್ದ.

ಆರ್. ಮಧುಸೂದನ್, ಹಾಸನ
ನಮ್ಮೂರಿನ ಹೋಟೆಲ್‌ಗೆ 'ಸದ್ಗತಿ' ಎಂದು ಹೆಸರಿಟ್ಟಿದ್ದಾರಲ್ಲಾ...?
ಚಪ್ಪಾಳೆ ತಟ್ಟೀ ತಟ್ಟೀ ಜನರ ಗತಿ (ಸಂಚಾರ) ಯನ್ನು ಸೆಳೆಯುವುದರಿಂದ 'ಸದ್'ಗತಿ'ಯೇ ಸರಿ.

ಸುಮನಾ, ತೆಲಂಗಾಣ
ಆಫೀಸಿನ ವಿಷಯ ಮನೆಗೆ, ಮನೆಯದು ಆಫೀಸಿಗೆ ತರಬಾರದೆನ್ನುತ್ತಿದ್ದರು. ಈಗ ಆಫೀಸೇ 24/7 ಮನೆಯಲ್ಲಿರುತ್ತಲ್ಲಾ?
ತಕ್ಕಂತೆ ನುಡಿ ಬದಲಾಗಿದೆ. ಝೂಮ್‌ನ ವಿಷಯ ರೂಮ್‌ಗೆ, ರೂಮ್‌ನ ವಿಷಯ ಝೂಮ್‌ಗೆ ತರಬಾರದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಣ್ಣು ಮುಗುಳ್ನಕ್ಕರೆ ಸಂಕ್ರಾಂತಿ; ಜೋರಾಗಿ ನಕ್ಕರೆ ಯುಗಾದಿ. ಗಂಟುಮುಖ ಇಟ್ಟರೆ?



ನರಕ ಚತುರ್ದಶಿ, ಅಮಾವಾಸ್ಯೆ, ಬಲಿ ಪಾಡ್ಯಮಿ.

ವಿ. ಹಮೀದ್, ವಿಟ್ಲ
ಹಾಸ್ಯ ಬರಹಕ್ಕೂ, ಪ್ರೇಮ ಬರಹಕ್ಕೂ ಇರುವ ವ್ಯತ್ಯಾಸವೇನು ಗುರೂ?
ಹಾಸ್ಯಬರಹ ಎರಡನೆಯ ಓದಿಗೆ ನಿಸ್ಸಾರ. ಪ್ರೇಮಬರಹ ಕಾಯಂ ರುಚಿಕರ ವಿಶೇಷತಃ ಅನ್ಯರದಾಗಿದ್ದರೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಜನ ಸುಳ್ಳನ್ನು ನಂಬುವ ಹಾಗೆ ಸತ್ಯವನ್ನು ನಂಬುವುದಿಲ್ಲವಲ್ಲಾ...?
ಸುಳ್ಳನ್ನು ನಂಬಿಸಲು ಪಡುವ ಶ್ರಮ, ಸೃಜನಶೀಲತೆ ಸತ್ಯದ ಹಿಂದೆ ಇರುವುದಿಲ್ಲವಲ್ಲ.

ಎನ್.ಕೆ. ಹೆಬ್ಬಾರ, ಕೋಣೆ
ಪುಕ್ಕಟೆ ಸಲಹೆ ಕೊಡುವವರು ನಿಮ್ಮೂರಲ್ಲಿಯೂ ಇದ್ದಾರೆಯೇ?
ಡುಂಡಿರಾಜ್ ತಾನೆ! ನಮ್ಮೂರಲ್ಲೇ ಇದ್ದಾರೆ. ಅವರ 'ಪುಕ್ಕಟೆ ಸಲಹೆ' ನಾಟಕ ನೂರು ಶೋ ಕಂಡಿದೆ.

ದೇವೇಂದ್ರ, ಕಡೂರು
ಹಣ ಯಾವಾಗಲೂ ಅವಶ್ಯಕತೆ ಇಲ್ಲದಿರುವವರ ಹತ್ತಿರವೇ ಜಾಸ್ತಿ ಇರುವುದೇಕೆ?
(ಆದಾಯಕ್ಕಿಂತ) ಅವಶ್ಯಕತೆ ಕಮ್ಮಿ ಇರುವುದರಿಂದ.

ಫಾಲನೇತ್ರ ಸಜ್ಜನ, ಶಿರಸಿ
ಆಸೆಯೇ ದುಃಖಕ್ಕೆ ಮೂಲ ಎಂದು ಚೀನಾಕ್ಕೆ ಅರಿವಾಗುವುದು ಎಂದು?
ತಮ್ಮ ಆಸೆಯೇ ಪ್ರಪಂಚದ ದುಃಖಕ್ಕೆ ಮೂಲ ಎಂದು ಈಗಲೇ ಅರಿವಾಗಿದೆ.

ಎಂ.ವಿ. ಕುಮಾರ್, ಬೆಂಗಳೂರು
'ತರಕಾರಿ' ಹೆಸರು ಬಂದ ಬಗೆ ಹೇಗೆ?
ತರಹೇವಾರಿ ಉಪಕಾರಿ > ತರಹೋಪಕಾರಿ > ತರೋಪ್ಕಾರಿ > ತರ್ಕಾರಿ > ತರಕಾರಿ!

ಬಿ.ಆರ್. ಉಷಾ, ಬೆಂಗಳೂರು
ಜನಸೇವೆಯೇ ಜನಾರ್ದನ ಸೇವೆ. ದೇಶಸೇವೆಯೇ ಈಶ ಸೇವೆ. ನಿಮ್ಮದು ಯಾವ ಸೇವೆ?
ಪ್ರಶ್ನೋತ್ತರ ಸೇವೆಯೇ ಭಾಷಾ ಸೇವೆ.

ಚನ್ನವೀರಪ್ಪ, ಬಿದರಹಳ್ಳಿ
ಬಾರ್‌ನ ಮೇಜಿಗೂ, ಗ್ರಂಥಾಲಯದ ಮೇಜಿಗೂ ಇರುವ ವ್ಯತ್ಯಾಸವೇನು?
ಸಮಾಜದ ದೃಷ್ಟಿಯಲ್ಲಿ ಕುಳಿತವರ ಇಮೇಜ್ ಬದಲಾಗುತ್ತದೆ.

ಪುರುಷೋತ್ತಮ ರೆಡ್ಡಿ, ಪಾವಗಡ
ಅರ್ಧ ಸೆಂಚುರಿ ದಾಟಿರುವ ಪರಿಚಯಸ್ಥೆಯನ್ನ 'ಚೆನ್ನಾಗಿದೀರಾ ಆಂಟಿ' ಅಂದ್ರೆ ಹೊಡೆಯಕ್ಕೆ ಬರ್ತಾಳಲ್ಲಾ ರಾಮೀ?
ಅವರ ಸಿಸ್ಟಮ್‌ಗೆ ಆಂಟಿ ಅನ್ನೋದು ವೈರಸ್ ತರಹ ಆಕ್ಟ್ ಆಗತ್ತೆ ಪುರುಷೀ.

## ಬಹುಮಾನಿತ ಪತ್ರ

ಸ್ವಾತಿ ಎಂ.ಎಸ್. ಗೌರಿಬಿದನೂರು
ಕುಡುಕರ ಕಣ್ಣಿಗೆ ಅಮಾವಾಸ್ಯೆಯ ರಾತ್ರಿ ಹೇಗೆ ಕಾಣುತ್ತದೆ?
ಚೆಲ್ಲಿದ ಬ್ಲ್ಯಾಕ್ ರಮ್‌ನಂತೆ.

ಎಚ್.ಎಸ್. ರಾಘವೇಂದ್ರ, ಬೆಂಗಳೂರು
ನೋಡಿದ ತಕ್ಷಣ ಇಷ್ಟವಾಗದ ವ್ಯಕ್ತಿಗಳು ಒಮ್ಮೆ ಮಾತನಾಡಿದ ಬಳಿಕ ಇಷ್ಟವಾಗಲು ಕಾರಣ?
ನಿಮಗೆ ಇಷ್ಟವಾಗುವ ಮಾತುಗಳನ್ನು ಆಡಿರುತ್ತಾರಲ್ಲ.

ವಿ.ಎಸ್. ಹಿಂದೂಪುರ, ಬಳ್ಳಾರಿ
ವೈರಿಗೂ, ವಂಚಕನಿಗೂ ಇರುವ ವ್ಯತ್ಯಾಸವೇನು?
ವೈರಿ ಕ್ರಿಮಿ; ವಂಚಕ ವೈರಸ್.

ಆರ್. ಸುನೀಲ್ ತರೀಕೆರೆ
ಕೆಲ ಸಾಹಿತಿಗಳು ಪೆನ್ನನ್ನು ಕೈಯಲ್ಲಿ ಹಿಡಿದೇ ಫೋಟೊ ತೆಗೆಸಿಕೊಳ್ತಾರಲ್ಲ, ಯಾಕೆ?



'ಯಾವಾನೋ ಬರ್‍ಕೊಡ್ತಾನೆ. ಇವನು ಒಂದು ದಿನವೂ ಪೆನ್ ಕೈಲಿ ಹಿಡಿದದ್ದು ನೋಡಿಲ್ಲ' ಎನ್ನದಿರಲೆಂದು.

ಹರಿತಸ, ಬೆಂಗಳೂರು
ಬಂಧನ ಮತ್ತು ಬಿಡುಗಡೆಯ ಮಧ್ಯಂತರದಲ್ಲಿ ನಡೆಯುವ ಪ್ರಕ್ರಿಯೆ ಯಾವುದು?
ವಶೀಲಿಯ ಚೆಂಡನ್ನು ಕಾನೂನಿನ ಪೇರಿಕೆಯತ್ತ ತೂರುವ ಲಗೋರಿ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ನಿಷ್ಠೆಯಿಂದಿರುವ ಸರ್ಕಾರಿ ಅಧಿಕಾರಿಗಳನ್ನು ಹುಡುಕಿದರೆ ಸಿಗುತ್ತಾರಾ?
ಸನಿಹದ ಗೋರಿಗಳ ಫಲಕಗಳಲ್ಲಿ ಪ್ರಯತ್ನಿಸಿ.

ರೇವತಿ, ಪಿರಿಯಾಪಟ್ಟಣ
ಸ್ವಾರ್ಥಿಗಳು ಕಾರ್ಯಸಾಧನೆಗೆ ಮಹಿಳೆಯರನ್ನು ಉಪಯೋಗಿಸುವುದು ಚೀನಾದ ಪಾಠವೇನು?
ಊಹೂಂ. ಈ ವಿಷಯದಲ್ಲಿ ಗುರುವಾಗಲು ನಮ್ಮಲ್ಲೇ ಸರ್ವತಂತ್ರ ಕುತಂತ್ರರು ಇದ್ದಾರೆ.

■ ರಾಮ್